## ತೆಂಗಿನ ಗರಿಯ ಗಿಳಿಗಳು



ನೆನೆದಾಗ ಅದೆಷ್ಟೋ ಹೊತ್ತು ತರುವ ಬಾಲ್ಯದ ದಿನಗಳ ನೆನಪುಗಳು, ಜೀವನದುದ್ದಕ್ಕೂ ಸಾಗುವ ನೆನಪಿನ ಬುತ್ತಿಯಲ್ಲಿ ಹಾಗೆ ಉಳಿದು ಬಿಟ್ಟಿವೆ. ಯಾವುದಾದರೂ ವಿಶೇಷ ವಸ್ತು ಅಥವಾ ಆಕೃತಿಗಳನ್ನು ಕಂಡಾಗ ಅವು ನಮ್ಮ ಬಾಲ್ಯ ಜೀವನದ ಕ್ಷಣಗಳನ್ನು ಹೇಗೆಲ್ಲಾ ರಸಮಯಗೊಳಿಸಿದ್ದವು ಎಂಬುದನ್ನು ಅರೆಕ್ಷಣ ಕಣ್ಣಮುಂದೆ ಕಟ್ಟಿಕೊಡುತ್ತವೆ. ತೆಂಗಿನ ಗರಿಯಲ್ಲಿ ಮಾಡಿದ ಚೆಂದದ ಗಿಳಿಗಳು ಈಚೆಗೆ ಕಣ್ಣಿಗೆ ಬಿದ್ದವು. ಸ್ನೇಹಿತರ ಜೊತೆಗೂಡಿ ನಾನೂ ಇಂತಹದ್ದೇ ಗಿಳಿಗಳನ್ನು ಮಾಡುತ್ತಿದ್ದದ್ದು ನೆನಪಿಗೆ ಬಂತು. ಮೊದಲ ಪ್ರಯತ್ನವು ಕೈಗೂಡದಿದ್ದಾಗ ಛಲಬಿಡದೆ, ಅಮ್ಮನ ಕೂಗಿಗೂ ಕಿವಿ ಕೊಡದೆಯೇ ಗಿಳಿ ಮಾಡುವುದರಲ್ಲಿಯೇ ನಿರತರಾಗಿ ಬಿಡುತ್ತಿದ್ದದ್ದು ನೆನಪಾಯಿತು. ಹೇಗೋ ಹರಸಾಹಸಪಟ್ಟು ಮಾಡಿದ ತೆಂಗಿನ ಗರಿಯ ಗಿಳಿಗೆ ಯಾರ ದೃಷ್ಟಿಯೂ ಬೀಳದಿರಲಿ ಎಂದು ಅಮ್ಮ ಇಡುತ್ತಿದ್ದ ಕೆಂಪು ಹಣೆಬೊಟ್ಟನ್ನು ಕದ್ದು ಗರಿಯ ಗಿಳಿಗೆ ಕಣ್ಣಾಗಿಸಿದ್ದೂ ಉಂಟು.

–ರಾಜೇಶ್, ಕಾರ್ಕಳ

## ದೀಪದ ಬುಡ!



ದಕ್ಷಿಣದ ಬದರಿ ಎಂದೇ ಹೆಸರಾದ ಮಂಡ್ಯದ ಮೇಲುಕೋಟೆಗೆ ಈ ಅಪೂರ್ಣಗೊಂಡ ರಾಯಗೋಪುರವೇ ಕಳಶವಿದ್ದಂತೆ. ಅಡಿಪಾಯವಿಲ್ಲದೆ ಬೃಹತ್ ಕಂಬಗಳನ್ನು ಮತ್ತು ಶಿಲೆಗಳನ್ನು ಎತ್ತಿ ಹಿಡಿದಿರುವ ಈ 'ರಾಯ ಗೋಪುರ' ಅಥವಾ 'ಗೋಪಾಲರಾಯನ ಕೋಟೆ ಬಾಗಿಲು' ಬಳಿ ನಿಂತರೆ ಇಡೀ ಮೇಲುಕೋಟೆಯ ವಿಹಂಗಮ ದೃಶ್ಯದ ದರ್ಶನವಾಗುತ್ತದೆ. ಜೊತೆಗೆ ಬೆಟ್ಟದ ಯೋಗಾ ನರಸಿಂಹಸ್ವಾಮಿ ದೇಗುಲವೂ.

ಒಡಲಲ್ಲಿ ಕಾವೇರಿಯನ್ನು ಹೊತ್ತಿರುವ ಇಲ್ಲಿನ ಭೂಮಿಯ ಮೇಲೆ ಸದಾ ಬೀಸುವ ತಂಗಾಳಿಯನ್ನು ಆಸ್ವಾದಿಸುತ್ತಾ, ಕೆತ್ತನೆಗಳನ್ನು ಕಣ್ಣು ತುಂಬಿಕೊಳ್ಳುತ್ತಾ, ಗೋಪುರಕ್ಕೆ ಪ್ರದಕ್ಷಿಣೆ ಬಂದರೆ ಮನಸ್ಸಿಗೆ ಆಹ್ಲಾದವೆನಿಸುತ್ತದೆ. ಆದರೆ ಈ ಜಾಗದಲ್ಲಿ ಕಸದ ತೊಟ್ಟಿಯೊಂದು ಕಣ್ಣಿಗೆ ಬಿತ್ತು. ಇದು ಇಡೀ ವಾತಾವರಣಕ್ಕೆ ಕಪ್ಪುಚುಕ್ಕೆಯಿದ್ದಂತೆ. ಸಿನಿಮಾ ಚಿತ್ರೀಕರಣ ಹಾಗೂ ಫೋಟೊ ಶೂಟ್‌ಗಾಗಿ ಎಗ್ಗಿಲ್ಲದಂತೆ ಬಳಸಲ್ಪಡುವ ಈ ಜಾಗವು ಕಸದ ತೊಟ್ಟಿಯಾಗಿ ಮಾರ್ಪಟ್ಟಿರುವುದು ದುರಂತ. ತನ್ನ ಐತಿಹಾಸಿಕ, ಧಾರ್ಮಿಕ, ಪೌರಾಣಿಕ ಹಿರಿಮೆಯಿಂದ ಭಾರತದ ಭೂಪಟದಲ್ಲಿ ದೀಪದಂತೆ ಬೆಳಗುತ್ತಿರುವ ಮೇಲುಕೋಟೆಯ ಪುಷ್ಕರಣಿಯ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಮಾನವನ ವಿಕೃತಿಗಳಿಗೆ ಕೊನೆಯೇ ಇಲ್ಲವೇ?

–ವಾ. ಮುರಳೀಧರ, ತೀರ್ಥಹಳ್ಳಿ

## ಕೃಷಿ ಮಿತ್ರ ಗೊರಬು!

ಚಿತ್ರದಲ್ಲಿ ಕಾಣುವ ಗೊರಬು ದಶಕಗಳ ಹಿಂದೆ ಮಳೆಗಾಲದಲ್ಲಿ ಕರಾವಳಿ ಮತ್ತು ಮಲೆನಾಡಿನ ಹೊಲ ಗದ್ದೆಗಳಲ್ಲಿ ಕೃಷಿ ಕೆಲಸದ ಸಮಯ ಸರ್ವೇ ಸಾಮಾನ್ಯವಾಗಿ ಕಾಣಸಿಗುತ್ತಿತ್ತು. ಗದ್ದೆ ಉಳುವ ಗಂಡಸರು ಮತ್ತು ಭತ್ತದ ಸಸಿಗಳನ್ನು ನೆಡುತ್ತಿರುವ ಹೆಂಗಸರು ತಲೆ ಮೇಲೊಂದು ಕಂಗಿನ ಹಾಳೆಯ 'ಮುಟ್ಟಲೆ' (ಶಿರಸ್ತ್ರಾಣ) ಧರಿಸಿ ಅದರ ಮೇಲೆ ಈ ಗೊರಬಿನ ಒಳಭಾಗವನ್ನು ಬೆನ್ನು ಮತ್ತು ತಲೆಯ ಆಧಾರದಲ್ಲಿ ಶಿರ, ದೇಹದ ಇಬ್ಬದಿ ಹಾಗೂ ಹಿಂಭಾಗವನ್ನು ಆವರಿಸುವಂತೆ ಇಟ್ಟುಕೊಂಡು ಮಳೆಯಿಂದ ರಕ್ಷಣೆ ಪಡೆಯುತ್ತಿದ್ದರು!

ಬಿದಿರನ ಹಂದರದ ಮೇಲೆ 'ತಂದೊಲಿಗೆ' ಮರದ ಅಗಲ ಒಣ ಎಲೆಗಳನ್ನು ಅಥವಾ ತಾಳೆ ಮರದ ಗರಿಗಳನ್ನು ಹದಮಾಡಿ ಬೀಳಲಿನಿಂದ ಹೆಣೆದು ಗಟ್ಟಿಮುಟ್ಟಾಗಿ ಈ ಸಾಧನವನ್ನು ತಯಾರಿಸಲಾಗುತ್ತದೆ. ನಿಸರ್ಗದತ್ತ ಕಚ್ಚಾ ವಸ್ತುಗಳಿಂದಲೇ ಇದು ಪೂರ್ತಿ ತಯಾರಾಗುತ್ತಿತ್ತು. ಕೊಂಚ ತೂಕವಿದ್ದರೂ ಮಳೆಯ ಚಳಿಗಿದು ಬೆಚ್ಚನೆಯ ಕಾವು ನೀಡುತ್ತಿತ್ತು. ಈಗಂತೂ ರೈನ್ ಕೋಟುಗಳು ಬಳಕೆಯಲ್ಲಿದ್ದು ಗೊರಬುಗಳು ಕಾಣೆಯಾಗಿವೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

